# ಕೀಲಿ ಉತ್ತರ

**ತರಗತಿ : 8** **ವಿಷಯ : ಸಮಾಜ ವಿಜ್ಞಾನ** **8/36**

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| **I.** | **ಬಹು ಅಂಶಿಯ ಆಯ್ಕೆಯ ಪ್ರಶ್ನೆಗಳು.** | **16×1=16** |
| 01 | A) ಕದಂಬ | |
| 02 | D) ನರ್ಮದಾ ನದಿ | |
| 03 | B) ಹಿಂದೂ ಧರ್ಮ | |
| 04 | D) ಕುಂಡಲ ಗ್ರಾಮ | |
| 05 | C) ವಿಕ್ರಮಾಂಕದೇವ ಚರಿತ | |
| 06 | A) ಗ್ರೀಕರು | |
| 07 | D) ಗ್ರಾಮಸಭೆ | |
| 08 | B) 1914 | |
| 09 | C) ಗ್ರಾಮಗಳು | |
| 10 | A) ಸಮಭಾಜಕ ವೃತ್ತ | |
| 11 | B) 82½° ಪೂರ್ವ ರೇಖಾಂಶ | |
| 12 | D) ಸ್ಥಳೀಯ ಮಾರುತಗಳು | |
| 13 | A) ಆ್ಯಡಂ ಸ್ಮಿತ್ | |
| 14 | D) ತಲಾ ವರಮಾನ | |
| 15 | C) ಪುನರ್ ರಫ್ತು | |
| 16 | B) ಕಣಗಿನ ಹಾಳ್ | |
| **II.** | **ಒಂದು ವಾಕ್ಯದಲ್ಲಿ ಉತ್ತರಿಸಿ.** | **4×1=4** |
| 17 | * ಪೆರುಮಕ್ಕಳ್ | |
| 18 | * ಪ್ರತಿಯೊಬ್ಬ ವ್ಯಕ್ತಿಯು ತನಗೆ ವಹಿಸಿದ ಪಾತ್ರವನ್ನು ನಿರ್ವಹಿಸುವುದನ್ನೇ ಪಾತ್ರಪ್ರಜ್ಞೆ ಎನ್ನುವರು | |
| 19 | * ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ ಸಮಾಜಗಳು, * ಪಶುಪಾಲನ ಸಮಾಜ, * ಕೃಷಿ ಸಮಾಜ,<br>* ಕೈಗಾರಿಕಾ ಸಮಾಜ | |
| 20 | – ಅನುಭೋಗಿ ಚಟುವಟಿಕೆ | |
| **III.** | **ಎರಡರಿಂದ ನಾಲ್ಕು ವಾಕ್ಯದಲ್ಲಿ ಉತ್ತರಿಸಿ.** | **6×2=12** |
| 21 | * ಪ್ರವಾಹದ ನಂತರ ಈ ನದಿಯು ಆಗಿಂದಾಗ್ಗೆ ತನ್ನ ಹಾದಿಯನ್ನು ಬದಲಿಸುವುದರಿಂದ ಮನೆಗಳು ಹಾಗೂ ಕೃಷಿ ಭೂಮಿ ನೆರೆಗೆ ಆಹುತಿಯಾಗುತ್ತಿದ್ದವು<br>* ಅಲ್ಲಿನ ಕಾಲುವೆಗಳನ್ನು ನಿಷ್ಕ್ರಿಯಗೊಳಿಸುತ್ತಿತ್ತು. ಈ ಕಾರಣಕ್ಕಾಗಿಯೇ ಅಲ್ಲಿನ ಜನ ಇದನ್ನು ದುಃಖದ ಪ್ರತೀಕವೆಂದು ಕರೆಯುತ್ತಾರೆ.<br>(ಪ್ರತಿಯೊಂದು ಅಂಶಕ್ಕೂ ಒಂದು ಅಂಕ) | |



P.T.O.

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| 22 | * ಜನರು ಸದಾ ಜಾಗರೂಕತೆಯಿಂದಿರಬೇಕು<br>* ಪ್ರಜಾಪ್ರಭುತ್ವದ ಯಶಸ್ಸು ಯಾವತ್ತು ತಾಳ್ಮೆಯನ್ನು ಅವಲಂಬಿಸಿರುವುದಾಗಿದೆ<br>* ಪ್ರಜಾಪ್ರಭುತ್ವವನ್ನು ರಕ್ಷಿಸುವ ಮನೋಭಾವ ಜನರಲ್ಲಿರಬೇಕು<br>* ಪ್ರಜಾಪ್ರಭುತ್ವದ ಯಶಸ್ಸು ಉತ್ತಮ ನಾಯಕತ್ವವನ್ನು ಅವಲಂಬಿಸಿರುತ್ತದೆ<br>* ವಿದ್ಯಾವಂತ ಮತ್ತು ಪ್ರಜ್ಞಾವಂತ ಮತದಾರ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣನಾಗಬಲ್ಲ<br>* ಪ್ರಜಾಪ್ರಭುತ್ವದ ಯಶಸ್ಸು ಜನರ ಭಾಗವಹಿಸುವಿಕೆಯನ್ನು ಅವಲಂಬಿಸಿದೆ<br>* ಜನರು ಕಡ್ಡಾಯವಾಗಿ ಚುನಾವಣೆಯಲ್ಲಿ ಮತ ಚಲಾಯಿಸಬೇಕು<br>(ಯಾವುದಾದರೂ 4 ಅಂಶಗಳು) | |
| 23 | ಉದಾಹರಣೆ – ಊಟ ಮಾಡುವುದು ನಿದ್ರಿಸುವುದು, ಶುಭಾಶಯ ಹೇಳುವುದು ಇತ್ಯಾದಿ.<br>ವಿವರಣೆ : ಊಟ ಮಾಡುವಾಗ ಅಥವಾ ಶಾಲೆಯಲ್ಲಿ ಕುಳಿತುಕೊಳ್ಳುವಾಗ ಹೇಗೆ ಊಟ ಮಾಡಬೇಕು, ಹೇಗೆ ಕುಳಿತುಕೊಳ್ಳಬೇಕು ಎಂಬ ಪ್ರಶ್ನೆಯನ್ನು ದಿನವೂ ಕೇಳುವುದಿಲ್ಲ | 1+1 |
| 24 | ಉತ್ತರಾರ್ಧಗೋಳ<br>ಶೇ 60 ಭೂ ಭಾಗ, ಶೇ 40 ಜಲ ರಾಶಿ<br>ದಕ್ಷಿಣಾರ್ಧಗೋಳ<br>ಶೇ 81 ಜಲರಾಶಿ, ಶೇ 19 ರಷ್ಟು ಭಾಗ – ಭೂ ಭಾಗ | 1+1 |
| 25 | * ಮಾಲಿನ್ಯಕಾರಕ ಅನಿಲಗಳನ್ನು ನಿಯಂತ್ರಿಸುವುದು, * ವಾಹನಗಳಿಂದ ಬರುವ ಹೊಗೆಯನ್ನು ನಿಯಂತ್ರಿಸುವುದು,<br>* ಹೆಚ್ಚು ಮರಗಳನ್ನು ಬೆಳೆಸುವುದು, * ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಬಳಸುವುದು,<br>* ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು, * ಕಾನೂನಿಂದ ನಿಯಂತ್ರಿಸುವುದು, * ಸಾಕ್ಷರತೆ ಮತ್ತು ಶಿಕ್ಷಣ<br>(ಯಾವುದಾದರೂ 4 ಅಂಶಗಳು) | |
| 26 | * ಉತ್ಪಾದನೆ ಹೆಚ್ಚಾಗುತ್ತದೆ, * ಉದ್ಯೋಗ ಅವಕಾಶ ಹೆಚ್ಚಾಗುತ್ತದೆ, * ವರಮಾನ ಹೆಚ್ಚಾಗುತ್ತದೆ, * ಪೂರೈಕೆ ಹೆಚ್ಚಾಗುತ್ತದೆ,<br>* ಜನರ ಜೀವನಮಟ್ಟ ಉತ್ತಮವಾಗುತ್ತದೆ, * ರಾಷ್ಟ್ರವು ಪ್ರಗತಿಯ ದಾರಿಯಲ್ಲಿ ಮುಂದುವರಿಯುತ್ತದೆ ಇದರಿಂದ ಬೇಡಿಕೆಯು ಹೆಚ್ಚಾದಾಗ ಬೆಲೆಯು ಹೆಚ್ಚಾಗುತ್ತದೆ<br>(ಯಾವುದಾದರೂ ನಾಲ್ಕು ಅಂಶಗಳು) | |
| **IV. ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.** | | **3×3=9** |
| 27 | * ನಗರದ ತಗ್ಗಿನ ಪ್ರದೇಶದಲ್ಲಿರುವ ಗ್ರಾಮವು ಜನವಸತಿಯ ಜಾಗವಾಗಿತ್ತು<br>* ಕ್ರಮಬದ್ಧವಾಗಿ ನಿರ್ಮಿಸಿದ ಮನೆಗಳನ್ನು , ರಸ್ತೆಗಳನ್ನು ಹಾಗೂ ಚರಂಡಿಗಳನ್ನು ನಾವಿಲ್ಲಿ ಕಾಣಬಹುದು<br>* ಸಾಮಾನ್ಯವಾಗಿ ಜನರು ಒಂದು ಅಥವಾ ಎರಡು ಅಂತಸ್ತಿನ ಮನೆಯನ್ನು ಹೊಂದಿದ್ದರು<br>* ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದ್ದು , ಅವುಗಳ ಗೋಡೆಗಳು ಭದ್ರವಾಗಿದ್ದವು<br>* ಮನೆಯ ಬಾಗಿಲುಗಳು ರಸ್ತೆಯ ಮಗ್ಗಲಿನಲ್ಲಿದ್ದವು<br>* ಯಾವ ಕಿಟಕಿಯು ರಸ್ತೆಗೆ ಮುಖ ಮಾಡಿರಲಿಲ್ಲ<br>* ಮನೆಗಳು ಸ್ನಾನದ ಕೊಠಡಿಗಳನ್ನು ಹೊಂದಿದ್ದವು<br>* ನಗರಗಳು ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದವು<br>* ಇಟ್ಟಿಗೆಗಳಿಂದ ನಿರ್ಮಿಸಲಾಗಿದ್ದು, ಚರಂಡಿಯನ್ನು ಚಪ್ಪಡಿಗಳಿಂದ ಮುಚ್ಚಲಾಗಿತ್ತು. ಮನೆಯ ಮೋರಿಗಳನ್ನು ಹೊರಗಿನ ಚರಂಡಿಗೆ ಸಂಪರ್ಕಿಸಲಾಗಿತ್ತು<br>* ಇಷ್ಟು ಸುಸಜ್ಜಿತವಾದ ನಗರ ನಿರ್ಮಾಣ ವ್ಯವಸ್ಥೆ ಆ ಕಾಲದ ಈಜಿಪ್ಟ್, ಮೆಸಪೊಟೇಮಿಯಾ ಮೊದಲಾದ ನಾಗರಿಕತೆಗಳಲ್ಲಿ ಕಂಡುಬರುವುದಿಲ್ಲ<br>(ಯಾವುದಾದರೂ ಆರು ಅಂಶಗಳು) | |

| ಪ್ರಶ್ನೆ ಸಂಖ್ಯೆ | ಉತ್ತರದ ವಿವರ | ಅಂಕ ವಿಂಗಡಣೆ |
|---|---|---|
| 28 | <br>A) ಉತ್ತರ ಧ್ರುವೀಯ ಅಧಿಕ ಒತ್ತಡ ಪಟ್ಟಿ<br>B) ಉತ್ತರ ಉಪಉಷ್ಣವಲಯದ ಅಧಿಕ ಒತ್ತಡ ಪಟ್ಟಿ<br>C) ದಕ್ಷಿಣ ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿ<br>D) ದಕ್ಷಿಣ ಧ್ರುವೀಯ ಅಧಿಕ ಒತ್ತಡ ಪಟ್ಟಿ | 1+2 |
| 29 | * ಸುಲಭ ರಚನೆ, * ಹೆಚ್ಚಿನ ಬಂಡವಾಳ, * ಹೆಚ್ಚಿನ ಪರಿಣತಿ, * ವಿಶ್ವಾಸಾರ್ಹತೆ, * ನಷ್ಟದ ಹಂಚಿಕೆ,<br>* ವ್ಯವಹಾರದ ರಹಸ್ಯ, * ಸರಳ ವಿಸರ್ಜನೆ<br>(ಯಾವುದಾದರೂ ಆರು ಅಂಶಗಳು) | |
| **V.** | **ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** | **1×4=4** |
| 30 | * ರಾಷ್ಟ್ರದಿಂದ ಭದ್ರತೆ ಮತ್ತು ರಕ್ಷಣೆಗಳನ್ನು ಪಡೆಯುತ್ತಾನೆ<br>* ಶಾಂತಿಯುತ ಜೀವನ ನಡೆಸುತ್ತಾನೆ<br>* ಶಿಕ್ಷಣ, ಆರೋಗ್ಯ , ವಿಮೆ, ಆಶ್ರಯ, ಉದ್ಯೋಗ ಹಾಗೂ ಇತರ ಸೌಲಭ್ಯಗಳನ್ನು ಅನುಭವಿಸುತ್ತಾನೆ<br>* ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಅನುಭೋಗಿಸುತ್ತಾನೆ<br>* ಚುನಾವಣಾ ಪ್ರಕ್ರಿಯೆಗಳಾದ ಮತದಾನ, ಚುನಾವಣೆಯಲ್ಲಿ ಸ್ಪರ್ಧಿಸುವುದರಲ್ಲಿ ಭಾಗವಹಿಸುವರು<br>* ರಾಷ್ಟ್ರಾಧ್ಯಕ್ಷ, ಉಪರಾಷ್ಟ್ರಾಧ್ಯಕ್ಷ, ಸರ್ವೋಚ್ಚ ಹಾಗೂ ಶ್ರೇಷ್ಠ ನ್ಯಾಯಾಲಯಗಳ ನ್ಯಾಯಾಧೀಶರು ಹಾಗೂ ಇತರೆ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅರ್ಹತೆಗಳನ್ನು ಪಡೆಯುತ್ತಾನೆ<br>* ಸಾರ್ವಜನಿಕ ಸೇವೆಗಳಿಗೆ ನೇಮಕಾತಿ ಪಡೆಯುವ ಅರ್ಹತೆ ಹೊಂದಿರುತ್ತಾನೆ<br>* ಮೂಲಭೂತ ಹಕ್ಕುಗಳನ್ನು ಅನುಭೋಗಿಸುತ್ತಾನೆ | |
| **VI.**<br>31 | ಭಾರತದ ನಕ್ಷೆ ಬಿಡಿಸಿ, ಕೆಳಗಿನ ಸ್ಥಳಗಳನ್ನು ಗುರುತಿಸಿ.<br>1) ಪಾಟಲೀಪುತ್ರ 2) ಪಂಜಾಬ್ 3) ಬನವಾಸಿ 4) ಅಜಂತ | **1+4=5** |

